‘ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್’ 2018ರಲ್ಲಿ ಪ್ರಕಟಿಸಿದ್ದು, ಇದರಲ್ಲಿ ಹರಿಹರನ ರಗಳೆಗಳ ಇಂಗ್ಲಿಷ್ ಅನುವಾದ ಕೂಡ ಕಾಣಬಹುದು. ಇದರ ಮುಂದುವರಿದ ಭಾಗವಾಗಿ ಅವರು ರಗಳೆಗಳ ಪ್ರತ್ಯೇಕ ಅನುವಾದದಲ್ಲೂ ತೊಡಗಿಕೊಂಡಿದ್ದಾರೆ.

ಪ್ರಾಚೀನ ಕಾವ್ಯಗಳ ಇಂಗ್ಲಿಷ್ ಅನುವಾದದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ಹಿರಿಯ ಕನ್ನಡ ವಿದ್ವಾಂಸರಾದ ಆರ್.ವಿ.ಎಸ್ ಸುಂದರಂ, 2017ರಲ್ಲಿ ದೇವೆನ್ ಎಂ. ಪಟೇಲ್ ಜೊತೆಗೂಡಿ ‘ಕವಿರಾಜಮಾರ್ಗಂ: ದಿ ವೇ ಆಫ್ ದಿ ಕಿಂಗ್ ಆಫ್ ಪೊಯೆಟ್ಸ್’, 2019ರಲ್ಲಿ ಆಮೆಲ್ ಶೆರೋನ್ ಜೊತೆಗೂಡಿ ರನ್ನನ ‘ಗದಾಯುದ್ಧಂ: ದಿ ಡ್ಯೂಯೆಲ್ ಆಫ್ ದಿ ಮೇಸಸ್’, 2020ರಲ್ಲಿ ಶುಭಚಂದ್ರ ಹಾಗೂ ಎಚ್.ಎಸ್. ಕೋಮಲೇಶ ಅವರ ಜೊತೆಗೂಡಿ ಶಿವಕೋಟ್ಯಾಚಾರ್ಯರ ‘ವಡ್ಡಾರಾಧನೆ’ಯನ್ನು ‘ವೆನಿರೇಶನ್ ಟು ದಿ ಎಲ್ಡರ್ಸ್’ ಎಂಬ ಹೆಸರಿನಲ್ಲಿ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಮೊದಲೆರಡು ಕೃತಿಗಳನ್ನು ‘ಮನೋಹರ್’ ಪ್ರಕಟಿಸಿದ್ದು, ಡಿ.ಎ. ಶಂಕರ್ ಸಂಪಾದಿಸಿರುವ ಮೂರನೆಯ ಕೃತಿಯನ್ನು ‘ರೂಟ್ಲೆಜ್’ ಪ್ರಕಟಿಸಿದೆ. ದೆಹಲಿಯ ‘ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ’ದ ಕನ್ನಡ ಪೀಠದ ಅಧ್ಯಕ್ಷರಾಗಿದ್ದ ಪುರುಷೋತ್ತಮ ಬಿಳಿಮಲೆಯವರು ಪ್ರಧಾನ ಸಂಪಾದಕರಾಗಿ ಈ ಯೋಜನೆಗಳನ್ನು ನಿರ್ವಹಿಸಿದ್ದರು.

ಎ.ಕೆ. ರಾಮಾನುಜನ್ ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ, ಅದು ಜಾಗತಿಕ ಮಟ್ಟದಲ್ಲಿ ಯಶಸ್ಸು ಕಂಡಿದ್ದು, ಕನ್ನಡದಲ್ಲಿ ವಚನಗಳ ಬಗ್ಗೆ ಹಿಂದೆಂದಿಗಿಂತಲೂ ಹೆಚ್ಚಿನ ಆಸಕ್ತಿ ಹುಟ್ಟುವಂತೆ ಮಾಡಿದ್ದಲ್ಲದೆ, ವಚನಗಳ ಅನುವಾದಕ್ಕೂ ಅನೇಕರನ್ನು ಪ್ರೇರೇಪಿಸಿತು. 2010ರಲ್ಲಿ ಎಚ್.ಎಸ್. ಶಿವಪ್ರಕಾಶ್‌ರ ‘ಐ ಕೀಪ್ ವಿಜಿಲ್ ಆಫ್ ರುದ್ರ: ದಿ ವಚನಾಸ್’ ಪೆಂಗ್ವಿನ್ ಕ್ಲಾಸಿಕ್ಸ್‌ನಡಿಯಲ್ಲಿ, 2017ರಲ್ಲಿ ವಿನಯ್ ಚೈತನ್ಯರ ‘ಸಾಂಗ್ಸ್ ಆಫ್ ಶಿವ: ವಚನಾಸ್ ಆಫ್ ಅಕ್ಕ ಮಹಾದೇವಿ’ ಹಾಗೂ 2019ರಲ್ಲಿ ಮನುದೇವನ್‌ರ ಅಲ್ಲಮನ ವಚನಗಳ ಅನುವಾದ ‘ಗಾಡ್ ಇಸ್ ಡೆಡ್: ದೇರ್ ಈಸ್ ನೋ ಗಾಡ್’ ಸ್ಪೀಕಿಂಗ್ ಟೈಗರ್ ಕ್ಲಾಸಿಕ್ಸ್‌ನಡಿಯಲ್ಲಿ ಪ್ರಕಟವಾದವು.

‘ಮೂರ್ತಿ ಕ್ಲಾಸಿಕಲ್ ಲೈಬ್ರರಿ’ ಮಾಲಿಕೆಯಲ್ಲಿ ಪ್ರಕಟವಾದ ಕನ್ನಡದ ಮತ್ತೊಂದು ಕ್ಲಾಸಿಕಲ್ ಕೃತಿಯೆಂದರೆ, 2024ರಲ್ಲಿ ಪ್ರಕಟವಾದ ‘ಕುಮಾರವ್ಯಾಸ ಭಾರತ’ದ ಇಂಗ್ಲಿಷ್ ಅನುವಾದ. ‘ದಿ ಕನ್ನಡ ಮಹಾಭಾರತ: ವಾಲ್ಯೂಂ 1’ ಹೆಸರಿನಲ್ಲಿ ಪ್ರಕಟವಾಗಿರುವ ಈ ಅನುವಾದ ಯೋಜನೆಯ ಸಂಪಾದಕರು ಸ್ಟೋನಿಬ್ರೂಕ್ ವಿಶ್ವವಿದ್ಯಾಲಯದ ಪ್ರೊಫೆಸರ್ ಎಸ್.ಎನ್. ಶ್ರೀಧರ್. ಸಿ.ಎನ್. ರಾಮಚಂದ್ರನ್ ಹಾಗೂ ನಾರಾಯಣ ಹೆಗ್ಡೆಯವರು ಒಗ್ಗೂಡಿ ಅನುವಾದಿಸಿದ್ದಾರೆ. ಮೊದಲ ಸಂಪುಟ ಏಳುನೂರು ಪುಟಗಳನ್ನು ಮೀರಿದ್ದು, ಈ ಬೃಹತ್ ಕಾವ್ಯದ ಮುಂದಿನ ಸಂಪುಟಗಳಿನ್ನೂ ಬರುವುದಿದೆ.

## ಇಲ್ಲಿಂದ ಮುಂದಕ್ಕೆ...

ಕೆ. ಸತ್ಯನಾರಾಯಣರ ಹೇಳಿಕೆಗೆ ಉತ್ತರದಂತೆ, ಅವರಿಗೆ ನಾನು ನೀಡಿದ ಪ್ರತಿಕ್ರಿಯೆಯ ಸಮರ್ಥನೆಯಂತೆ ಕಳೆದ ಒಂದೂವರೆ ದಶಕದ ಅನುವಾದದ ಫಸಲು ಕಾಣಿಸುತ್ತಿದೆ. ವಿಪುಲ ಕನ್ನಡ ಸಾಹಿತ್ಯದ ವಿಪುಲ ಅನುವಾದದ ಸಫಲತೆಯಿರುವುದು ಯುವ ತಲೆಮಾರು ಅವುಗಳ ಬಗ್ಗೆ ತಿಳಿದುಕೊಂಡು ತಮ್ಮ ಸಂಶೋಧನಾ ಅಧ್ಯಯನದಲ್ಲಿ ತೊಡಗಿಸಿಕೊಂಡಾಗ. ಆದರೆ, ಕನ್ನಡಾನುವಾದದ ಅಧ್ಯಯನವಾಗಲಿ, ಕನ್ನಡ ಸಾಹಿತ್ಯಾಧ್ಯಯನವಾಗಲಿ ಈ ಬೆಳವಣಿಗೆಗಳ ಬಗ್ಗೆ ಅಕಡೆಮಿಕ್ ನೆಲೆಯಲ್ಲಿ ಎಷ್ಟರ ಮಟ್ಟಿಗೆ ಚರ್ಚಿಸಿವೆಯೆಂಬುದು ತಿಳಿದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಮತ್ತೊಂದು ಅಧ್ಯಯನ ಕ್ಷೇತ್ರ, ಪ್ರಕಾಶನ ಇತಿಹಾಸದ ಹಿನ್ನೆಲೆಯಲ್ಲಿ ಪುಸ್ತಕಗಳ ಇತಿಹಾಸದ ಅಧ್ಯಯನ. ಇಲ್ಲಿಯವರೆಗಿನ ಆಧುನಿಕ ಕ್ಲಾಸಿಕ್‌ಗಳ, ಕ್ಲಾಸಿಕಲ್ ಪಠ್ಯಗಳ ಅನುವಾದದಲ್ಲಿ ಎದ್ದು ಕಾಣಿಸುತ್ತಿರುವುದು ಯುವ ತಲೆಮಾರುಗಳ ಗೈರು. ಇದು ಮುಂದಿನ ವರ್ಷಗಳಲ್ಲಿ ದೊಡ್ಡ ಕಂದಕವನ್ನು ಸೃಷ್ಟಿ ಮಾಡುವುದರಲ್ಲಿ ಅನುಮಾನವಿಲ್ಲ. ಯುವ ತಲೆಮಾರುಗಳನ್ನು ಪಠ್ಯಗಳನ್ನು ಓದುವ, ಅನುವಾದಿಸುವ, ಅವುಗಳ ಅಧ್ಯಯನ ನಡೆಸುವ ನಿಟ್ಟಿನಲ್ಲಿ ತರಬೇತುಗೊಳಿಸಬೇಕಾಗಿರುವುದು ಕನ್ನಡದ ಮುಂದಿರುವ ಬಹು ದೊಡ್ಡ ಸವಾಲು. ●